**ಪಾಠ–2** **ಏಪ್ರಿಲ್ 14–21**

# ದಾನಿಯೇಲ ಮತ್ತು ಕೊನೆಯ ಕಾಲ

**ಸಬ್ಬತ್ತಿನ ಮಧ್ಯಾಹ್ನ**

**ಈ ವಾರದ ಅಧ್ಯಯನಕ್ಕಾಗಿ :** ಲೂಕ 16:10; ದಾನಿಯೇಲ 1, 2; 3;1–6; ಪ್ರಕಟಣೆ 13:11–15; ದಾನಿಯೇಲ 3:13–18; ಯೋಹಾನ 3:7; ದಾನಿಯೇಲ 4,6.

**ಸ್ಮರಣ ವಾಕ್ಯ : ನೀನು ಈ ರಹಸ್ಯವನ್ನು ಬೈಲಿಗೆ ತರಲು ಸಮರ್ಥನಾದ ಕಾರಣ, ನಿಮ್ಮ ದೇವರಾದ ದೇವಾಧಿದೇವನೂ ರಾಜರ ಒಡೆಯನೂ ರಹಸ್ಯಗಳನ್ನು ವ್ಯಕ್ತಗೋಳಿಸುವವನೂ ಆಗಿದ್ದಾನೆಂಬುದು ನಿಶ್ಚಯ ಎಂದು ಹೇಳಿದನು (ದಾನಿಯೇಲನು 2:47).**

ದೇವರು ಇಸ್ರಾಯೇಲ್ಯರ ಕುರಿತಾಗಿ ದೊಡ್ಡ ಯೋಜನೆಗಳನ್ನು ಹಾಕಿಕೊಂಡಿದ್ದನು. ನೀವು ನನಗೆ ಯಾಜಕ ರಾಜ್ಯವೂ ಪರಿಶುದ್ಧ ಜನವೂ ಆಗಿರುವಿರಿ. (ವಿಮೋಚನೆಕಾಂಡ 19:6). ಈ ಪರಿಶುದ್ಧ ರಾಜ್ಯ, ಯಾಜಕ ರಾಜ್ಯವು ಯೇಹೋವನೆ ದೇವರು ಎಂಬ ಸಾಕ್ಷಿಯಾಗಿ ನಿಲ್ಲಬೇಕಾಗಿತ್ತು. (ಯೆಶಾಯ 43:10, 12). ದುರದೃಷ್ಟವಶಾತ್ ಈ ದೇಶವು ಈ ಪರಿಶುದ್ಧವಾದ ಕರೆಗೆ ಸರಿಯಾಗಿ ಸ್ಪಂದಿಸಲಿಲ್ಲ. ಕೊನೆಯದಾಗಿ, ಅದು ಬಾಬೇಲಿಗೆ ಸೆರೆಯಾಗಿ ಹೋಯಿತು.

ಆಸಕ್ತಿಕರವಾಗಿ, ಸೆರೆವಾಸದ ದುರಂತದ ಹೊರೆತಾಗಿಯೂ ದೇವರು ಯೆಹೂದ್ಯರನ್ನು ವ್ಯಯಕ್ತಿಕವಾಗಿ ರಕ್ಷಿಸಿ ಅವರನ್ನು ತನ್ನ ಸಾಕ್ಷಿಯನ್ನಾಗಿ ಮಾಡಿದನು. ಬೇರೆ ಮಾತುಗಳಲ್ಲಿ ಹೇಳುವುದಾದರೆ ಒಂದು ಹಂತದಲ್ಲಿ, ಇಸ್ರಾಯೇಲ್ಯರು ಮತ್ತು ಯೆಹೂದ ರಾಜ್ಯವು ಮಾಡಲಾಗದ ಕಾರ್ಯವನ್ನು ದಾನಿಯೇಲನು ಮತ್ತು ಆತನ ಮೂವರು ಸ್ನೇಹಿತರು ಮಾಡಿ ತೋರಿಸಿದರು. ಒಂದು ವಿಧದಲ್ಲಿ, ಇಸ್ರಾಯೇಲ್ಯರು ಯಾವ ರೀತಿಯಲ್ಲಿ ಇರಬೇಕು ಅವರು

ಏನು ಮಾಡಬೇಕಾಗಿತ್ತು ಎಂಬುದನ್ನು ಇವರು ಮಾದರಿಯಾಗಿ ಜೀವಿಸಿ ತೋರಿಸಿದರು.

ಹೌದು, ಕೊನೆಯ ದಿನಗಳ ಸಮಯದಿಂದ ಅವರ ಕಥೆಯು ಸ್ಥಳ ಮತ್ತು ಸಮಯದಿಂದ ಬಹಳ ದೂರವಿದ್ದಾರೆ, ಆದರೆ ಇವರು ನಮಗೆ ತೋರಿಸುವ ಕ್ರಿಯೆಗಳಲ್ಲಿ ನಾವು ಕೊನೆಯ ದಿನಗಳಲ್ಲಿ ಅನುಭವಿಸುವ ಶ್ರಮೆಗಳ ಛಾಯೆಯನ್ನು ತೋರಿಸುತ್ತಾರೆ. ಇದು ಕೇವಲ ಕೊನೆಯ ಕಾಲದಲ್ಲಿ ಜೀವಿಸುವವರ ವಿಚಾರವಾಗಿ ಮಾತ್ರವಲ್ಲದೆ ಅವರು ಹೇಗೆ ಬಾಬೇಲ್ ಎಂಬ ಅನ್ಯರ ದೇಶದಲ್ಲಿ ಮತ್ತು ದೇವರ ಕುರಿತಾಗಿ ತಿಳಿಯದ ಜನರ ನಡುವೆ ದೇವರ ಪರವಾಗಿ ಹೇಗೆ ಸಾಕ್ಷಿಯಾಗಿ ಜೀವಿಸಬೇಕು ಎಂಬುದನ್ನು ತೋರಿಸುತ್ತದೆ. ಈ ಕಥೆಗಳು ನಮಗೆ ಯಾವ ರೀತಿಯ ಪಾಠಗಳನ್ನು ಹೇಳುತ್ತವೆ?

**ಈ ವಾರದ ಪಾಠವನ್ನು ಏಪ್ರಿಲ್ 14 ರ ಸಬ್ಬತ್ತಿಗಾಗಿ ಅಧ್ಯಯನ ಮಾಡಿರಿ.**

**ಭಾನುವಾರ**

## ಸ್ವಲ್ಪದರಲ್ಲಿಯೇ ನಂಬಿಕೆಯಾಗಿರುವುದು

"ಸ್ವಲ್ಪವಾದದ್ದರಲ್ಲಿ ನಂಬಿಗಸ್ತರಾದವರು ಬಹಳವಾದದ್ದರಲ್ಲಿಯೂ ನಂಬಿಗಸ್ತರಾಗುವರು. ಸ್ವಲ್ಪವಾದದ್ದರಲ್ಲಿ ಅನ್ಯಾಯ ಗಾದವನು ಬಹಳವಾದದ್ದರಲ್ಲಿಯೂ ಅನ್ಯಾಯಗಾರನಾಗುವನು". (ಲೂಕ 16:10).

ಇಲ್ಲಿ ಯೇಸುವಿನ ಮಾತುಗಳನ್ನು ಗಮನಿಸಿರಿ. ಇದು ಬಹಳ ಸುಲಭ, ಹೌದಲ್ಲವೇ, ಸಂಧಾನ ಮಾಡಿಕೊಳ್ಳುವುದು ಎಂದರೆ ಸ್ವಲ್ಪದರಲ್ಲಿ ಅನ್ಯಾಯಗಾರನಾಗಿರುವುದು ಸ್ವಲ್ಪದರಲ್ಲಿ ಎಂಬುದರಲ್ಲಿ ಸಮಸ್ಯೆಯಿಲ್ಲ. ಆದರೆ ಅದು ಬಹಳ ಮುಖ್ಯವಾಗುತ್ತದೆ. ನಮ್ಮ ವ್ಯಯಕ್ತಿಕ ಮತ್ತು ಇತರರ ಅನುಭವದಿಂದ ಕಲಿಯವ ಪ್ರಕಾರ ಅಥವಾ (ಎರಡು) ಸೇರಿದಂತೆ ನಾವು ಬೀಳುವ ತನಕ ಒಂದು ಸಂಧಾನವು ಮತ್ತೊಂದು ಸಂಧಾನಕ್ಕೆ ನಡೆಸುತ್ತದೆ.

ಈ ಆಲೋಚನೆಯನ್ನು ಮನಸ್ಸಿನಲ್ಲಿ ಇಟ್ಟುಕೊಂಡು, ದಾನಿಯೇಲ 1 ಅಧ್ಯಾಯದ ಬಾಬೇಲಿನಲ್ಲಿ ಸೆರೆಯಲ್ಲಿದ್ದ ಈ ನಾಲ್ಕು ಯೆಹೂದ್ಯದ ಯುವಕರ ಅನುಭವವನ್ನು ತೆಗೆದುಕೊಳ್ಳೋಣ.

**ದಾನಿಯೇಲ ಅಧ್ಯಾಯ 1 ನ್ನು ಓದಿರಿ. ದಾನಿಯೇಲ, ಹನನ್ಯ, ಮಿಶಾಯೇಲ್, ಅಜರಿಯರು ತೆಗೆದುಕೊಂಡ ನಿರ್ಧಾರವು ಇಸ್ರಾಯೇಲ್ಯರು ತೆಗೆದುಕೊಳ್ಳಬೇಕಾದ ನಿರ್ಧಾರಕ್ಕೆ ಹೇಗೆ ಸಾಕ್ಷಿಯಾಗುತ್ತದೆ?**

---

---

ಅವರು ಏನು ತಿಂದರು ಮತ್ತು ಏನು ಕುಡಿದರು ಅದರ ಫಲವಾಗಿ ಮಾತ್ರ ಅವರು ಎಲ್ಲರಗಿಂತ ಹತ್ತು ಪಟ್ಟು ಹೆಚ್ಚಿನ ಜ್ಞಾನ ಮತ್ತು ವಿವೇಕವನ್ನು ಹೊಂದಿದ್ದರು ಎಂದು ವಚನವು ನೇರವಾಗಿ ಹೇಳುವುದಿಲ್ಲ. (ದಾನಿಯೇಲ 1:20), ಆದರೆ ಸಂಬಂಧವು ಬಹಳ ಸ್ಪಷ್ಟವಾಗಿ ಕಾಣುತ್ತದೆ. ದೇವರು ಅವರಿಗೆ ಈ ಜ್ಞಾನವನ್ನು ಮತ್ತು ವಿವೇಕವನ್ನು ನೀಡಿದನು ಎಂದು ಅಧ್ಯಾಯವು ಹೇಳುತ್ತದೆ. ಅದು, ಬಾಬೇಲಿನ ದೇಶದ ಅಶುದ್ಧವಾದ ಆಹಾರವನ್ನು ಅವರು ತೆಗೆದುಕೊಳ್ಳದೆ ತಮ್ಮನ್ನು ತಾವು ಅಪವಿತ್ರಮಾಡಿಕೊಳ್ಳದೆ ಇದ್ದ ಪರಿಣಾಮವಾಗಿ ದೇವರು ಅವರಲ್ಲಿ ಕೆಲಸ ಮಾಡಿ ಈ ಆಶೀರ್ವಾದವನ್ನು ನೀಡಿದನು. ಅವರು ವಿಧೇಯರಾದರು, ದೇವರು ಅವರ ವಿಧೇಯತೆಯ ಪ್ರತಿಫಲವಾಗಿ ಅವರನ್ನು ಅಶಿರ್ವದಿಸಿದನು. ಒಂದು ವೇಳೆ ಇಸ್ರಾಯೇಲ್ಯರು ಕೂಡ ಈ ನಾಲ್ಕು ಯೆಹೂದ್ಯ ಯುವಕರ ಹಾಗೆ ವಿಧೇಯತೆಯನ್ನು ತೋರಿಸಿ ಆತನ ಮಾತಿಗೆ ಬೆಲೆ ಕೊಟ್ಟಿದ್ದರೆ ದೇವರು ಅವರನ್ನು ಕೂಡ ಇದೆ ರೀತಿಯಲ್ಲಿ ಆಶೀರ್ವದಿಸುತ್ತಿದ್ದನ್ನಲ್ಲವೇ? ಹೌದು, ಈದಿನ ನಾವು ವಿಧೆಯರಾಗಿದ್ದರೆ ನಮಗೂ ಕೂಡ ಆತನು ಇದೆ ರೀತಿಯ ಆಶೀರ್ವಾದವನ್ನು ನೀಡುತ್ತಾನಲ್ಲವೇ?

**ನಮಗೆ ಹೆಚ್ಚಿನ ಬೆಳಕು ಮತ್ತು ಸತ್ಯವನ್ನು ನೀಡಲಾಗಿರುವುದರಿಂದ, ಸಭೆಯಾಗಿ ನಮ್ಮನ್ನು ನಾವು ಪ್ರಶ್ನಿಸಿಕೊಳ್ಳಬೇಕು; ನಮಗೆ ನೀಡಲಾಗಿರುವ ಸತ್ಯಕ್ಕೆ ನಂಬಿಗಸ್ತರಾಗಿ ಮತ್ತು ವಿಧೇಯರಾಗಿ ಇರಬೇಕಲ್ಲವೇ? ಅದೇ ಸಮಯದಲ್ಲಿ, ದೇವರಿಗೆ ನಾವು ಪ್ರಬಲವಾದ ಸಾಕ್ಷಿಗಳಾಗಿ ಇರುವುದಕ್ಕೆ ವ್ಯಯಕ್ತಿಕವಾಗಿ ಯಾವ ನಿರ್ಧಾರಗಳನ್ನು ತೆಗೆದುಕೊಳ್ಳಬೇಕು?**

**ಸೋಮವಾರ**

## ದಾನಿಯೇಲನ ದೀನತೆ

ಪ್ರಪಂಚದೆಲ್ಲೆಡೆ, ಸಾವಿರಾರು ವರ್ಷಗಳ ತನಕ ದಾನಿಯೇಲ 2 ನೇಯ ಅಧ್ಯಾಯವು ಸತ್ಯವೇದದ ದೇವರನ್ನು ಅರ್ಥಮಾಡಿಕೊಳ್ಳುವಂತೆ ಸಹಾಯ ಮಾಡಿದೆ. ದೇವರು ಇದ್ದಾನೆ ಮತ್ತು ಆತನ ಭವಿಷ್ಯಜ್ಞಾನ ಕ್ಕೆ ಶಕ್ತಿಶಾಲಿಯಾದ ತರ್ಕಬದ್ಧವಾದ ಪುರಾವೆಯನ್ನು ನೀಡುತ್ತದೆ. ಒಂದು ವಿಧದಲ್ಲಿ ಈ ಅಧ್ಯಾಯವು ದೇವರ ಭವಿಷ್ಯಜ್ಞಾನಕ್ಕೆ ಮತ್ತು ಆತನ ಅಸ್ತಿತ್ವಕ್ಕೆ ಬೇಕಾದ ಪ್ರಕಟಣೆಯನ್ನು ತೋರಿಸುತ್ತದೆ.

**ದಾನಿಯೇಲ 2 ನ್ನು ಓದಿರಿ. ದೇವರ ವಾಸ್ತವತೆಗೆ ಸಮಂಜಸವಾದ ಸಾಕ್ಷಿಯನ್ನು ಈ ಅಧ್ಯಾಯವು ಹೇಗೆ ಒದಗಿಸುತ್ತದೆ?ನೋಡಿರಿ, ಈ ಪುಸ್ತಕದಲ್ಲಿ ಯುರೋಪ್ ನ ಕುರಿತಾದ ಚಿತ್ರಣವನ್ನು ಗಮನಿಸಿರಿ (ದಾನಿಯೇಲ 2:40–43). 26 ನೂರು ವರ್ಷಗಳ ಹಿಂದೆ ಜೀವಿಸಿದ ಒಬ್ಬ ಮನುಷ್ಯನು ಭವಿಷ್ಯದ ಕುರಿತಾಗಿ ಹೇಗೆ ಇಷ್ಟು ಸ್ಪಷ್ಟವಾಗಿ ತಿಳಿಸಲು ಸಾದ್ಯ ಎಂದು ಆಲೋಚಿಸಿರಿ?**

ತನಗೆ ಏನು ತಿಳಿಸಲ್ಪಟ್ಟಿದೆಯೋ ಅದಕ್ಕೆ ದೇವರಿಗೆ ಸಲ್ಲಬೇಕಾದ ಎಲ್ಲಾ ಪ್ರಶಂಸೆಯನ್ನು ಯಾವುದೇ ಸಂದೇಹವಿಲ್ಲದೆ ನೀಡುತ್ತಾನೆ. ಎಷ್ಟು ಸುಲಭವಾಗಿ

ತನ್ನ ಸ್ವಂತ ಜ್ಞಾನದ ಮೇಲೆ ಆಧಾರವಾಗಿ ತನ್ನ ಸ್ವಂತ ಬುದ್ಧಿಯೆಂದು ತನ್ನನ್ನು ತಾನು ಹೊಗಳಿಕೊಳ್ಳಬಹುದಾಗಿತ್ತು. ಆದರೆ ದಾನಿಯೇಲನಿಗೆ ಅದಕ್ಕಿಂತ ಹೆಚ್ಚಿಗೆ ತಿಳಿದಿತ್ತು. ಅವನು ಮತ್ತು ಇತರರು ಮಾಡಿದ ಪ್ರಾರ್ಥನೆ (ದಾನಿಯೇಲ 2:17–23) ದೇವರ ಮೇಲೆ ಅವರು ಹೇಗೆ ಅಧಾರವಾಗಿದ್ದರು ಎಂಬುದನ್ನು ತೋರಿಸುತ್ತದೆ; ಇಲ್ಲದೆ ಹೋದರೆ ಅವರು ಕೂಡ ಇತರ ಜ್ಞಾನಿಗಳ ಜೊತೆಯಲ್ಲಿ ಸಾಯಬೇಕಾಗಿತ್ತು.

ನಂತರ ದಾನಿಯೇಲನು ರಾಜನ ಕೆಲಸಗಾರರು ಬುದ್ಧಿವಂತರು, ಶಕುನಿಗಾರರು, ಮತ್ತು ಮಂತ್ರಗಾರರು ಕನಸನ್ನು ಹೇಳಲು ಸಾಮರ್ಥ್ಯವಿಲ್ಲ ಎಂಬುದಾಗಿ ರುಜು ಮಾಡಿದನು. ಇದಕ್ಕೆ ವೈರುದ್ಯವಾಗಿ ಪರಲೋಕದ ದೇವರು ರಹಸ್ಯಗಳನ್ನು ತಿಳಿಸುತ್ತಾನೆ ಯಾಕೆಂದರೆ ಆತನು ಮಾತ್ರ ನಿಜವಾದ ದೇವರಾಗಿದ್ದಾನೆ.

ಅದ್ದರಿಂದ, ತನ್ನ ದೀನತೆಯುಲ್ಲಿ ಮತ್ತು ದೇವರ ಮೇಲೆ ಅವಲಂಬಿತನಾಗಿರುವುದರಲ್ಲಿ ದಾನಿಯೇಲನು ಶಕ್ತಿಶಾಲಿಯಾದ ಸಾಕ್ಷಿಯಾಗಿದ್ದನು. ದಾನಿಯೇಲನು, ಈ ಹಿಂದೆ, ದೀನತೆಯನ್ನು ತೋರಿಸಿದ್ದಾನೆ, ಮತ್ತು ಈ ದಿನಗಳಲ್ಲಿ ಇಂತಹ ದೀನತೆಯನ್ನು ಹೇಗೆ ತೋರಿಸಬಹುದು? ರಕ್ಷಣೆಯ ಯೋಜನೆಯ ಸಂಪೂರ್ಣವಾದ ಚಿತ್ರಣವನ್ನು ದಾನಿಯೇಲನು ಪಡೆದಿರಲಿಲ್ಲ ಮತ್ತು ನಮ್ಮಲ್ಲಿ ಯಾವುದಾದರೂ ದೀನತೆಯಿದ್ದರೆ ಅದು ಕ್ರಿಸ್ತನು ಶಿಲುಬೆಯ ಮಾಡಿದ ತ್ಯಾಗದ ಜ್ಞಾನವಾಗಿರಬೇಕು,

**ಶಿಲುಬೆಯು ನಮಗೆ ಯಾವ ರೀತಿಯ ದೀನತೆಯನ್ನು ಕಲಿಸುತ್ತದೆ? ಇದು ನಮಗೆ ಏನು ಹೇಳುತ್ತದೆ ಇದು ನಮ್ಮ ಪಾಪದ ಜೀವನದ ಕುರಿತಾಗಿ ಅಲ್ಲದೆ ರಕ್ಷಣೆಗಾಗಿ ನಾವು ದೇವರ ಮೇಲೆ ಹೇಗೆ ಸಂಪೂರ್ಣವಾಗಿ ಅವಲಂಬಿತರಾಗಿದ್ದೇವೆ ಎಂದು ಹೇಗೆ ತೋರಿಸುತ್ತದೆ? ಶಿಲುಬೆ ಇಲ್ಲದೆ ಹೋದರೆ ನಾವು ಎಲ್ಲಿರುತ್ತಿದ್ದೆವು. ಶಿಲುಬೆಯನ್ನು ಬಿಟ್ಟು ಹೊಗಳಿಕೊಳ್ಳಲು ನಮ್ಮಲ್ಲಿ ಬೇರೆ ಏನಿದೆ?** ಗಲಾತ್ಯ 6:14 ನ್ನು ನೋಡಿರಿ.

ಮಂಗಳವಾರ

## ಬಂಗಾರದ ಪ್ರತಿಮೆ

ಸತ್ಯವೇದದ ವಿಧ್ಯಾರ್ಥಿಗಳು ಪ್ರಕಟಣೆ 13 ಮತ್ತು ದಾನಿಯೇಲ 3 ನೇಯ ಅಧ್ಯಾಯದಲ್ಲಿರುವ ಮೂವರು ಇಬ್ರಿಯರು ದೂರಾ ಪ್ರಾಂತ್ಯದಲ್ಲಿ ನಡೆದ ಘಟನೆಯ ಸಂಬಂಧವನ್ನು ಗಮನಿಸಿದ್ದಾರೆ. ಹಿಂದಿನ ಕಾಲದಲ್ಲಿ ದೇವರ ಮಕ್ಕಳು ಎದುರಿಸಿದ ಹಿಂಸೆಯನ್ನು ಕೊನೆಯ ಕಾಲದಲ್ಲಿಯೂ ಕೂಡ ದೇವರ ಮಕ್ಕಳು ಎದುರಿಸಬೇಕಾಗುತ್ತದೆ.

ದಾನಿಯೇಲ 3:1–6 ನ್ನು ಪ್ರಕಟಣೆ 13:11–15 ರ ಜೊತೆಗೆ ಹೋಲಿಸಿರಿ ಈ ಎರಡು ವಚನ ಭಾಗಗಳಲ್ಲಿ ಕಂಡು ಬರುವ ಸಾಮ್ಯತೆಯೇನು?

________________________________________

________________________________________

ಎರಡು ವಿಷಯಗಳಲ್ಲಿ ಆರಾಧನೆಯು ಬಹಳ ಪ್ರಮುಖ ವಿಷಯವಾಗಿದೆ, ಆದರೆ ಎರಡು ಕೂಡ ಬಲವಂತದ ಆರಾಧನೆಯಾಗಿದೆ. ದೇವರೊಬ್ಬನಿಗೆ ಸಲ್ಲಬೇಕಾದ ಆರಾಧನೆಯನ್ನು ರಾಜಕೀಯ ಶಕ್ತಿಗಳು ಅವರನ್ನು ಆರಾಧಿಸುವಂತೆ ಬಲವಂತಪಡಿಸುವುದಾಗಿದೆ.

**ದಾನಿಯೇಲ 3:13–18 ನ್ನು ಓದಿರಿ. ಈ ಕಥೆಯಿಂದ ಬರಲಿರುವ ಘಟನೆಗಳನ್ನು ನಾವು ಯಾವ ರೀತಿಯಲ್ಲಿ ಎದುರಿಸಬೇಕು ಮತ್ತು ಕೊನೆಯ ದಿನಗಳಲ್ಲಿ ನಡೆಯುವ ಘಟನೆಗಳಿಗೆ ನಾವು ಹೇಗೆ ಸಿದ್ದತೆಯನ್ನು ಮಾಡಿಕೊಳ್ಳಬೇಕು.**

________________________________________

________________________________________

ಲೋಕದಲ್ಲಿ ಬಹಳ ಶಕ್ತಿಶಾಲಿಯಾದ ನಾಯಕನಾಗಿ ನೆಬುಕದ್ನೆಚರನು ಈ ಜನರನ್ನು ಮತ್ತು ಅವರ ದೇವರನ್ನು ಅವಮಾನಿಸಿದನು. ನನ್ನ ಕೈಯಿಂದ

ನಿಮ್ಮನ್ನು ತಪ್ಪಿಸುವ ಆ ದೇವರು ಯಾರು? ಎಂದು ಹೇಳಿದನು. ಆ ದೇವರು ಯಾರು ಎಂದು ಅವನು ಅತೀ ಶೀಘ್ರದಲ್ಲೇ ಕಂಡುಕೊಳ್ಳುವವನಾಗಿದ್ದನು. ನಂತರ ಅವನು ಶದ್ರಕ್ ಮೇಶಕ್ ಅಬೇದ್ನೆಗೋ ಎಂಬುವರ ದೇವರಿಗೆ ಸ್ತೋತ್ರವಾಗಲಿ! ಆತನು ತನ್ನ ದೂತನನ್ನು ಕಳುಹಿಸಿ ತನ್ನಲ್ಲಿ ಭರವಸವಿಟ್ಟು ರಾಜಾಜ್ಞೆಯನ್ನು ಜಯಿಸಿ ತನ್ನನ್ನೇ ಹೊರೆತು ಇನ್ನಾವ ದೇವರನ್ನೂ ಸೇವಿಸಿ ಪೂಜಿಸಬಾರದೆಂದು ಸ್ವದೇಹ ಗಳನ್ನು ಮರಣಕ್ಕೆ ಒಪ್ಪಿಸಿದ ತನ್ನ ಸೇವಕರನ್ನು ಉದ್ಧರಿಸಿದ್ದಾನಲ್ಲಾ (ದಾನಿಯೇಲ 3:28)

ಇಂತಹ ಅದ್ಭುತವನ್ನು ನೋಡಿದ ಮೇಲೆ ಈ ಮನುಷ್ಯರು ಆರಾಧಿಸುವ ದೇವರಲ್ಲಿ ಯಾವುದೋ ಒಂದು ವಿಶೇಷತೆ ಇದೆ ಎಂದು ಗ್ರಹಿಸುವದರಲ್ಲಿ ಯಾವುದೇ ಪ್ರಶ್ನೆ ಉದ್ಭವಿಸುವುದಿಲ್ಲ.

ಒಂದು ವೇಳೆ ಈ ಯುವಕರು ಬೆಂಕಿಯಿಂದ ರಕ್ಷಿಸಲ್ಪಡದೆ ಇದ್ದರೂ ಕೂಡ ಅವರು ತೆಗೆದುಕೊಂಡ ನಿರ್ಧಾರವು ನರೆವೇರುವ ಸಾಧ್ಯತೆಯಾಗಿತ್ತು. (ದಾನಿಯೇಲನು 3:18). ಸಜೀವವಾಗಿ ಸುಟ್ಟು ಹೋದರೂ ಕೂಡ ರಾಜನ ಆಜ್ಞೆಯನ್ನು ಮೀರಿ ಯಾವುದು ಸರಿಯೋ ಅದನ್ನು ಅವರು ಮಾಡಲು ಹೇಗೆ ತೀರ್ಮಾನಿಸಿದರು? ಈ ಕಥೆಯು ಸನ್ನಿವೇಶದ ಹೊರೆತಾಗಿಯೂ ಅವರ ನಂಬಿಕೆಯ ಮತ್ತು ಅವರು ಯಾವುದನ್ನೂ ನಂಬಿದ್ದರೋ ಅದಕ್ಕಾಗಿ ದೃಢವಾಗಿ ನಿಲ್ಲುವ ಇಚ್ಛೆಯನ್ನು ಹೊಂದಿದ್ದರೂ ಎಂದು ತಿಳಿಸುತ್ತದೆ.

**ಕೊನೆಯ ದಿನಗಳಲ್ಲಿ ಆರಾಧನೆಯ ಸಮಸ್ಯೆಯು ಎದ್ದಾಗ ಆವರ ಹಾಗೆ ನಾವು ದೃಢವಾಗಿ ನಿಲ್ಲುತ್ತೇವೆ ಎಂಬ ಭರವಸೆಯನ್ನು ನಾವು ಪಡೆಯುವುದು ಹೇಗೆ? ಈಗ ನಾವು ಸ್ವಲ್ಪದರಲ್ಲಿ ನಂಬಿಕೆಯಾಗಿರದಿದ್ದರೆ ಮುಂದೆ ಬರುವ ದೊಡ್ಡ ವಿಷಯದಲ್ಲಿ ಹೇಗೆ ನಾವು ನಂಬಿಗಸ್ತರಾಗಿ ನಿಲ್ಲಬಹುದು?**

**ಬುಧವಾರ**

## ಅನ್ಯಜನರ ಮಾನಸಾಂತರ

ದಾನಿಯೇಲ 3 ನೇಯ ಅಧ್ಯಾಯವು ನೆಬುಕದ್ನೆಚರನು ನಿಜವಾದ ದೇವರ ಶಕ್ತಿಯನ್ನು ಮತ್ತು ಅಸ್ತಿತ್ವವನ್ನು ಗ್ರಹಿಸುವುದರ ಮೂಲಕ ಅಂತ್ಯವಾಗುತ್ತದೆ. ಆದರೆ ದೇವರ ಕುರಿತಾದ ಜ್ಞಾನವು ಮತ್ತು ಅದರ ಶಕ್ತಿಯು ರಕ್ಷಣೆಗೆ ಬಹಳ ಮುಖ್ಯವಾದ ಹೊಸದಾಗಿ ಹುಟ್ಟುವ ಅನುಭವಕ್ಕೆ ಸರಿಸಾಟಿಯಲ್ಲ (ಯೋಹಾನ 3:7 ನ್ನು ನೋಡಿರಿ). ದಾನಿಯೇಲ 4:30 ರಲ್ಲಿ ಚಿತ್ರಿಸಲಾಗಿರುವ ಮನುಷ್ಯನು ಮಾನಸಾಂತರ ಹೊಂದಿರುವ ವ್ಯಕ್ತಿ ಎಂದು ಹೇಳುವುದರಲ್ಲಿ ಯಾವುದೇ ಸಂಶಯವಿಲ್ಲ.

**ದಾನಿಯೇಲ 4:30 ನ್ನು ಓದಿರಿ. ಈ ಮನುಷ್ಯನ ಸಮಸ್ಯೆಯೇನು?** ಯೋಹಾನ 15:5, ಅ ಪೋ ಕೃ 17:28, ದಾನಿಯೇಲ 5:23 ನ್ನೂ ಕೂಡ ಓದಿರಿ.

________________________________________

________________________________________

ಈ ಅಧ್ಯಾಯದ ಮುಕ್ತಾಯಕ್ಕೆ ಬಂದ ಸಮಯಕ್ಕೆ ನೆಬುಕದ್ನೆಚರನು ಬಹಳ ಕಷ್ಟವಾದರೂ ಕೂಡ ತನ್ನ ಪಾಠವನ್ನು ಕಲಿತಿದ್ದನು, ದೇವರಲ್ಲಿ ಇದ್ದ ನಿಜವಾದ ಶಕ್ತಿಯನ್ನು ಮತ್ತು ಆ ದೇವರು ಇಲ್ಲದೆ ತಾನು ಏನೇನೂ ಅಲ್ಲ ಎಂಬುದನ್ನು ಗ್ರಹಿಸಿದನು.

ಹಿಂದೆ ಗರ್ವದಿಂದ ತುಂಬಿದ ಆರಸನು ಈಗ ದೇವರ ದೀನತೆಯ ಮಗುವಾಗಿದ್ದನು; ದಬ್ಬಾಳಿಕೆಯ, ಅತಿಕ್ರಮಣದ ಅರಸನು, ಬುದ್ಧಿವಂತ ಮತ್ತು ಕರುಣೆಯ ರಾಜನು ಹಿಂದೆ ಪರಲೋಕದ ದೇವರನ್ನು ನಿಂದಿಸಿ ಮತ್ತು ಹೀಯಾಳಿಸಿದಾತನು, ಈಗ ಪರಲೋಕ ದೇವರ ಶಕ್ತಿಯನ್ನು ಗ್ರಹಿಸಿಕೊಂಡು ಆ ದೇವರ ಹೆಸರನ್ನು ಪ್ರಸಿದ್ಧಿ ಪಡಿಸಲು ತೀರ್ಮಾನಿಸಿದನು ಮತ್ತು ಆತನನ್ನು ಆರಾಧಿಸುವವರ ಸಂತೋಷವನ್ನು ಕಾಪಾಡಲು ಪಣತೊಟ್ಟನು.

ರಾಜಾಧಿರಾಜನಾದ ದೇವರ ಗದರಿಸುವಿಕೆಯಿಂದ ನೆಬುಕದ್ನೆಚರನು ನಿಜವಾದ ಶ್ರೇಷ್ಠತೆಯು ದೇವರನ್ನು ಅರಿಯುವುದೇ ಆಗಿದೆ ಎಂಬ ಸತ್ಯವನ್ನು ಮತ್ತು ಲೋಕದ ಎಲ್ಲಾ ರಾಜರು ತಿಳಿದುಕೊಳ್ಳಬೇಕಾದ ಈ ವಿಷಯವನ್ನು ಗ್ರಹಿಸಿದನು. ಯೆಹೋವನು ನಿಜವಾದ ದೇವರು ಎಂಬ ವಿಷಯವನ್ನು ಈಗ ನೆಬುಕದ್ನೆಚರನಾದ ನಾನು ಪರಲೋಕ ರಾಜನನ್ನು ಹೊಗಳಿ ಕೊಂಡಾಡಿ ಕೀರ್ತಿಸುತ್ತೇನೆ; ಆತನ ಕಾರ್ಯಗಳೆಲ್ಲಾ ಸತ್ಯ ಆತನ ಮಾರ್ಗಗಳೆಲ್ಲಾ ನ್ಯಾಯ ಸೊಕ್ಕಿನಿಂದ ನಡೆಯುವವರನ್ನು ತಗ್ಗಿಸಬಲ್ಲನು ಎಂದುಗ್ರಹಿಸಿದನು ಎಲೆನ್ ಜಿ ವೈಟ್ ಪಿತೃಗಳು ಮತ್ತು ಪ್ರವಾದಿಗಳು ಪುಟ 521.

ದಾನಿಯೇಲ 4:35 ನ್ನು ಓದಿರಿ. ನೆಬುಕದ್ನೆಚರನು ದೇವರ ಕುರಿತಾಗಿ ಯಾವ ವಿಷಯಗಳನ್ನು ವ್ಯಕ್ತಪಡಿಸಿದ್ದಾನೆ?

________________________________________

________________________________________

ದಾನಿಯೇಲ 4 ನೇಯ ಅದ್ಯಾಯವು ಅನ್ಯನಾದ ಅರಸನು ದೇವರನ್ನು ಆತನ ಅಧಿಕಾರವನ್ನು, ರಾಜ್ಯಭಾರವನ್ನು ಮತ್ತು ಇಬ್ರಿಯ ದೇವರನ್ನು ಅರಿಯುವುದರ ಮೂಲಕ ಅಂತ್ಯವಾಗುತ್ತದೆ. ಈ ವಿಷಯವು ಆದಿ ಸಭೆಯಲ್ಲಿ ನಡೆದ ವಿಚಾರಕ್ಕೆ ಮುನ್ನುಡಿಯಾಗಿತ್ತು, ದೇವರ ಶಕ್ತಿಯ ಮೂಲಕ ಯೆಹೂದ್ಯರ ಸಾಕ್ಷಿಯ ಮೂಲಕ ಅನೇಕ ಅನ್ಯರು ದೇವರ ವಿಷಯವನ್ನು ತಿಳಿದುಕೊಂಡು ಆ ಸತ್ಯವನ್ನು ಲೋಕದ ಎಲ್ಲಾ ಕಡೆಗೂ ಸಾರಿದರು.

ಯೋಹಾನ 3:7 ನ್ನು ಓದಿರಿ. ನಾವು ಲೋಕದ ಕೊನೆಯ ಕಾಲವನ್ನು ಮರಣ ಶಾಸನ, ಆರಾಧನೆ, ಮತ್ತು ಹಿಂಸೆಯ ಹಿನ್ನಲೆಯಲ್ಲಿ ನೋಡಿದರೂ ಕೂಡ ಯೇಸುವು ಇಲ್ಲಿ ಏನು ಹೇಳುತ್ತಿದ್ದಾರೆ, ಎಲ್ಲದಕ್ಕಿಂತ ಮಿಗಿಲಾಗಿ ಇದು ಹೇಗೆ ಜನರನ್ನು ಕೊನೆಯ ಕಾಲಕ್ಕೆ ಸಿದ್ದಗೊಳಿಸುತ್ತದೆ?

ಗುರುವಾರ

## ದಾನಿಯೇಲನ ನಂಬಿಕೆ

ದಾನಿಯೇಲ 6 ನೇಯ ಅಧ್ಯಾಯವನ್ನು ಓದಿರಿ ನಂತರ ಈ ಮುಂದಿನ ಪ್ರಶ್ನೆಗಳಿಗೆ ಉತ್ತರಿಸಿರಿ.

1. ದಾನಿಯೇಲ 6:4,5 ದಾನಿಯೇಲನ ಗುಣಲಕ್ಷಣದ ಕುರಿತಾಗಿ ಏನು ಹೇಳುತ್ತದೆ? ನಾವು ಈ ವಚನಗಳಿಂದ ಯಾವ ಪಾಠವನ್ನು ಕಲಿಯಬಹುದು ಮತ್ತು ಅವುಗಳನ್ನು ನಾವು ಹೇಗೆ ನೋಡಬಹುದು?

---

2. ಪ್ರಕಟಣೆಯ ಪುಸ್ತಕದಲ್ಲಿ ಹೇಳಲಾಗಿರುವ ಕೊನೆಯ ಕಾಲದ ಘಟನೆಗಳಿಗೂ ಮತ್ತು ಇಲ್ಲಿರುವ ಘಟನೆಗಳಿಗೂ ಯಾವ ರೀತಿಯ ಸಾಮ್ಯತೆಯನ್ನು ನಾವು ನೋಡಬಹುದು? ಪ್ರಕಟನೆ 13:4,8,11–17.

---

3. ಈ ಸನ್ನಿವೇಶದಲ್ಲಿ ನಿಮ್ಮನ್ನು ನೀವು ದಾನಿಯೇಲನ ಸ್ಥಾನದಲ್ಲಿ ಊಹಿಸಿಕೊಳ್ಳಿರಿ. ಪ್ರಾರ್ಥನೆ ಮಾಡದಿರಲು ಯಾವ ರೀತಿಯ ತಾರ್ಕಿಕ ಮತ್ತು ಸಮಂಜಸವಾದ ಕಾರಣವನ್ನು ನೀಡಬಹುದು?ಆತನು ಮಾಡಿರುವ ಕಾರ್ಯವನ್ನು ನಾವು ಮಾಡದೆ ಇರಲು ನಾವು ಕೊಡುವ ಕಾರಣ ಏನಾಗಿರಬಹುದು ಮತ್ತು ಇದರಿಂದ ಆತನು ಸಿಂಹಗಳ ಗವಿಯಿಂದ ಹೇಗೆ ತಪ್ಪಿಸಿಕೊಳ್ಳಬಹುದಾಗಿತ್ತು?

---

4. ದಾನಿಯೇಲನು ಯಾಕೆ ಪ್ರಾರ್ಥಿಸುವುದನ್ನು ನಿಲ್ಲಿಸಲಿಲ್ಲ, ಆ ಸಮಯದಲ್ಲಿ ಪ್ರಾರ್ಥಿಸದೆ ಇದ್ದರೂ ಕೂಡ ಆತನನ್ನು ಯಾರು ಕೇಳುತ್ತಿರಲಿಲ್ಲ?

---

**5. ದಾನಿಯೇಲನು ಸಿಂಹಗಳ ಗವಿಗೆ ಬೀಳುವ ಮುನ್ನ ಅರಸನಾದ ದರ್ಯಾವೆಷನು ಏನು ಹೇಳಿದನು (ದಾನಿಯೇಲ 6:16) ಇದು ಅರಸನಿಗೆ ದಾನಿಯೇಲನ ದೇವರ ಕುರಿತಾದ ವಿಷಯವು ತಿಳಿದಿತ್ತು? ದಾನಿಯೇಲನು ಆರಾಧಿಸಿದ ಮತ್ತು ಸೇವಿಸಿದ ದೇವರ ಕುರಿತಾಗಿ ಅವನು ಯಾವ ರೀತಿಯ ಸಾಕ್ಷಿಯನ್ನು ನೀಡಿದ್ದನು?**

---

**ಶುಕ್ರವಾರ**

**ಮುಂದಿನ ಆಲೋಚನೆ :** ಲೋಕದ ಚರಿತ್ರೆಯ ಅಂತ್ಯಕ್ಕೆ ನಾವು ಬರುವಾಗ ದಾನಿಯೇಲ ಪುಸ್ತಕದ ಪ್ರವಾದನೆಗಳು ನಮ್ಮ ವಿಶೇಷ ಗಮನವನ್ನು ಸೆಳೆಯಬೇಕು, ಯಾಕೆಂದರೆ ಅವು ನಾವು ಜೀವಿಸುತ್ತಿರುವ ಈಗಿನ ಕಾಲದ ಕುರಿತಾಗಿ ಹೇಳುತ್ತವೆ. ಇದರ ಜೊತೆಗೆ ಹೊಸ ಒಡಂಬಡಿಕೆಯ ಭೋಧನೆಗಳನ್ನು ನಾವು ಸೇರಿಸಿಕೊಳ್ಳಬೇಕು. ಸೈತಾನನು ಪ್ರವಾದನೆ ಪುಸ್ತಕಗಳಾದ ದಾನಿಯೇಲ ಮತ್ತು ಪ್ರಕಟಣೆಯ ಪುಸ್ತಕಗಳನ್ನು ಅರ್ಥ ಮಾಡಿಕೊಳ್ಳಲು ಸಾಧ್ಯವಿಲ್ಲ ಎಂದು ಜನರನ್ನು ನಂಬಿಸುತ್ತಾನೆ. ಆದರೆ ವಾಗ್ದಾನವು ಬಹಳ ಸರಳವಾಗಿದೆ ಈ ಪ್ರವಾದನೆಗಳನ್ನು ಓದುವವರಿಗೆ ವಿಶೇಷವಾದ ಆಶೀರ್ವಾದಗಳನ್ನು ದೇವರು ವಾಗ್ದಾನ ಮಾಡಿದ್ದಾನೆ. ಜ್ಞಾನಿಗಳಿಗೆ ವಿವೇಕವಿರುವುದು (ದಾನಿಯೇಲನು 12:10), ಈ ವಚನದಲ್ಲಿ ಹೇಳಿರುವ ಪ್ರವಾದನೆಗಳು ಕೊನೆಯ ದಿನಗಳಲ್ಲಿ ಬಹಿರಂಗವಾಗುತ್ತವೆ: ಮತ್ತು ತನ್ನ ಸೇವಕನಾದ ಯೋಹಾನನಿಗೆ ಪ್ರಕಟಣೆಯಲ್ಲಿ ನೀಡಲಾದ ಎಚ್ಚರಿಕೆಗಳು ಶತಮಾನಗಳ ತನಕ ಮಾರ್ಗದರ್ಶನವಾಗುತ್ತವೆ. ಈ ಪ್ರವಾದನ ವಾಕ್ಯಗಳನ್ನು ಓದುವಂಥವನೂ ಕೇಳುವಂಥವರೂ ಈ ಪ್ರವಾದನೆಯಲ್ಲಿ ಬರೆದಿರುವ ಮಾತುಗಳನ್ನು ಕೈಕೊಂಡು ನಡೆಯುವಂಥವರೂ ಧನ್ಯರು ಅವು ನೆರವೇರುವ ಸಮಯವು ಸಮೀಪವಾಗಿದೆ.(ಪ್ರಕಟಣೆ 1:3. ಎಲೆನ್ ಜಿ ವೈಟ್ ಪ್ರವಾದಿಗಳು ಮತ್ತು ಅರಸರು ಪುಟ 547.

ದಾನಿಯೇಲನ ಪುಸ್ತಕವನ್ನು ರಾಜ್ಯಗಳು ಏಳುವುದು ಮತ್ತು ಬೀಳುವುದು, ನ್ಯಾಯವಿಚಾರಣೆಯ ಹಿನ್ನಲೆಯಲ್ಲಿ ನೋಡಿದರೂ ಕೂಡ (ದಾನಿಯೇಲ 7:22,26; 8:14), ಮತ್ತು ದೇವರ ಮಕ್ಕಳಿಗೆ ಉಂಟಾಗುವ ಹಿಂಸೆಯಿಂದ ದೇವರು ಅವರನ್ನು ಬಿಡಿಸುತ್ತಾನೆ ಎಂದು ನೋಡಿದರೂ (ದಾನಿಯೇಲ 12:1) ಕೊನೆಯ ಕಾಲದಲ್ಲಿ ಯಾವ ರೀತಿಯ ಹಿಂಸೆಯೂ ಉಂಟಾದರೂ ಮತ್ತು ಅದು ಯಾವ ಬಂದರೂ ಕೂಡ ದೇವರ ಮಕ್ಕಳಾಗಿ ನಾವು ಎಲ್ಲದಕ್ಕೂ ಸಿದ್ಧರಾಗಿರಬೇಕು ಎಂದು ನಾವು ನೋಡಿದ್ದೇವೆ. ಈ ಆಲೋಚನೆಯಲ್ಲಿ ಈ ಕಥೆಗಳು ಕೊನೆಯ ಕಾಲಕ್ಕೆ ಬೇಕಾದ ಮುಖ್ಯವಾದ ಸಂದೇಶಗಳನ್ನು ನೀಡುತ್ತವೆ. ಮೃಗದ ಗುರುತು ಮತ್ತು ಶ್ರಮೆಯ ಸಮಯ ಮತ್ತು ಮುಂದೆ ಬರಲಿರುವ ಹಿಂಸೆಯ ಕುರಿತಾದ ಜ್ಞಾನವನ್ನು ಹೊಂದುವುದು ಇದ್ದರೂ ಕೂಡ ದೇವರ ಜೊತೆಗೆ ನಮ್ಮ ಸಂಭಂದವು ಸರಿಯಾಗಿ ಇಲ್ಲದೆ ಹೋದರೆ ಈ ಜ್ಞಾನವು ನಮ್ಮನ್ನು ಹೆಚ್ಚಿನ ತೊಂದರೆಗೆ ಸಿಲುಕಿಸುತ್ತದೆ. ಇದಕ್ಕಿಂತ ಮಿಗಿಲಾಗಿ ದಾನಿಯೇಲ ಮತ್ತು ಇತರರು ಹಾಗೂ ನೆಬುಕದ್ನೆಚರನು ಹೊಂದಿದ್ದ ಹೊಸದಾಗಿ ಹುಟ್ಟುವ ಅನುಭವವನ್ನು ನಾವು ಹೊಂದಬೇಕಾಗಿದೆ.

## ಚರ್ಚಿಸಬೇಕಾದ ಪ್ರಶ್ನೆಗಳು

1. ದಾನಿಯೇಲನ ಪ್ರಾರ್ಥನೆಯನ್ನು ದಾನಿಯೇಲ 9:3–19 ರಲ್ಲಿ ಓದಿರಿ. ಈ ಪ್ರಾರ್ಥನೆಯು ಕೃಪೆ, ಮತ್ತು ನಮ್ಮ ಸ್ವಂತ ಕ್ರಿಯೆಗಳ ಆಧಾರದ ಮೇಲೆ ಅಲ್ಲದೆ ದೇವರು ತನ್ನ ಕೃಪೆಯಲ್ಲಿ ನಮ್ಮನ್ನು ಬಿಡಿಸುತ್ತಾನೆ ಎಂಬ ಸತ್ಯವನ್ನು ದಾನಿಯೇಲನು ಹೇಗೆ ಅರ್ಥಮಾಡಿಕೊಂಡಿದ್ದನು?ಈ ಸತ್ಯವನ್ನು ಕೇವಲ ತಿಳಿದುಕೊಳ್ಳುವುದು ಮಾತ್ರವಲ್ಲ ಆದರೆ ಅದನ್ನು ಅನುಭವಿಸುವುದು ಬಹಳ ಮುಖ್ಯವಾಗಿದೆ?

2. ರಾಜಕೀಯ ಶಕ್ತಿಗಳಿಂದ ತಮ್ಮ ವಿಶ್ವಾಸಕ್ಕೆ ಧಕ್ಕೆ ಬಂದಾಗ ಮೂವರು ಇಬ್ರಿಯರು (ದಾನಿಯೇಲ 3) ಮತ್ತು ದಾನಿಯೇಲನು (ದಾನಿಯೇಲ

6) ಎದುರಿಸಿದ ಸವಾಲುಗಳ ಕುರಿತಾಗಿ ನಿಮ್ಮ ತರಗತಿಯಲ್ಲಿ ಚರ್ಚಿಸಿರಿ.ಈ ಎರಡು ಸನ್ನಿವೇಶಗಳಲ್ಲಿ ಇರುವ ಸಮಾನತೆಗಳು ಯಾವುವು?ವ್ಯತ್ಯಾಸಗಳು ಯಾವುವು? ಮತ್ತು ಈ ಎರಡು ಘಟನೆಗಳಲ್ಲಿ ನಾವು ನಂಬಿಕೆಯಾಗಿದ್ದರೆ ದೇವರು ನಮ್ಮನ್ನು ಹೇಗೆ ರಕ್ಷಿಸುತ್ತಾನೆ ಎಂದು ಹೇಗೆ ತಿಳಿಯಬಹುದು?

3. ಹೊಸದಾಗಿ ಹುಟ್ಟುವುದು ಎನ್ನುವುದರ ಅರ್ಥವೇನು? ನಾವು ಹೊಸದಾಗಿ ಹುಟ್ಟಲೇಬೇಕು ಎಂದು ಯೇಸು ಯಾಕೆ ಹೇಳುತ್ತಾನೆ.